# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 790 |
| ಮಾನ್ಯ ಸದಸ್ಯರ ಹೆಸರು | ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ಸಚಿವರು | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | 26.12.2022 |

| | ಪ್ರಶ್ನೆ | ಉತ್ತರ |
|---|---|---|
| (ಅ) | ಮೈಸೂರು ವಿಶ್ವವಿದ್ಯಾಲಯ ಅಡಿಯಲ್ಲಿ 2022-23ನೇ ಸಾಲಿನಿಂದ ಅನ್ವಯ ಆಗುವಂತೆ ಹೊಸದಾಗಿ ಸಂಶೋಧನೆ (ಪಿ.ಎಚ್.ಡಿ) ಕೈಗೊಳ್ಳಬಯಸುವವರಿಗೆ ಎಷ್ಟು ವರ್ಷ ಕಾಲಾವಕಾಶ ಇದೆ ಮತ್ತು ಎಷ್ಟು ವರ್ಷಗಳ ಅವಧಿಗೆ ಫೆಲೋಶಿಪ್ ನೀಡಲಾಗುತ್ತದೆ; (ಸಂಪೂರ್ಣ ವಿವರ ನೀಡುವುದು) | ಮೈಸೂರು ವಿಶ್ವವಿದ್ಯಾಲಯದಲ್ಲಿ 2022-23ನೇ ಸಾಲಿನಿಂದ ಅನ್ವಯವಾಗುವಂತೆ ಹೊಸದಾಗಿ ಸಂಶೋಧನೆ (ಪಿ.ಹೆಚ್.ಡಿ) ಕೈಗೊಳ್ಳಬಯಸುವವರಿಗೆ ಮೈಸೂರು ವಿಶ್ವವಿದ್ಯಾಲಯದ 2017ರ ಪಿ.ಹೆಚ್.ಡಿ. ನಿಯಮಾವಳಿ ಪ್ರಕಾರ 06 ವರ್ಷಗಳು + 01 ವರ್ಷ ವಿಸ್ತರಣಾ ಅವಧಿ ಸೇರಿ ಒಟ್ಟು 07 ವರ್ಷಗಳ ಕಾಲಾವಕಾಶ ಇರುತ್ತದೆ.<br><br>ಫೆಲೋಶಿಪ್ ಅವಧಿ 05 ವರ್ಷಗಳು. ಆದರೆ, ಶಿಷ್ಯವೇತನವನ್ನು 05 ವರ್ಷಗಳವರೆಗೆ ಅಥವಾ ಮಹಾಪ್ರಬಂಧ ಸಲ್ಲಿಸುವವರೆಗೆ, ಇದರಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ನೀಡಲಾಗುತ್ತದೆ. |
| (ಆ) | ಮೈಸೂರು ವಿಶ್ವವಿದ್ಯಾಲಯದ ಪಿ.ಹೆಚ್.ಡಿ. ಪದವಿ ಪ್ರವೇಶ ಪರೀಕ್ಷಾ ಕ್ರಮದಲ್ಲಿ ಏನಾದರೂ ಬದಲಾವಣೆ/ಸುಧಾರಣೆ ಆಗಿದೆಯೇ; (ಆಗಿದ್ದಲ್ಲಿ, ಮಾಹಿತಿ ನೀಡುವುದು) | ಯಾವುದೇ ಬದಲಾವಣೆ ಇರುವುದಿಲ್ಲ. |
| (ಇ) | ಒಂದು ವೇಳೆ ನಿಗಧಿತ ಅವಧಿಯೊಳಗೆ ಪಿ.ಎಚ್.ಡಿ. ಪೂರ್ಣಗೊಳಿಸದಿದ್ದಲ್ಲಿ ವಿಸ್ತರಣೆಗೆ ಅವಕಾಶ ಇದೆಯೇ ಹಾಗೂ ಮಹಿಳೆಯರು ಮತ್ತು ದೈಹಿಕ ನ್ಯೂನತೆಯುಳ್ಳವರಿಗೆ ವಿನಾಯಿತಿ ಇದೆಯೇ (ವಿವರ ನೀಡುವುದು) | ಪಿ.ಹೆಚ್.ಡಿ. ನಿಯಮಾವಳಿಯ ಪ್ರಕಾರ 07 ವರ್ಷಗಳಿಗೂ ಮೇಲ್ಪಟ್ಟು ವಿಸ್ತರಣೆಗೆ ಅವಕಾಶವಿರುವುದಿಲ್ಲ. |
| (ಈ) | ಪ್ರತಿ ವರ್ಷ ಎಷ್ಟು ವಿದ್ಯಾರ್ಥಿಗಳಿಗೆ ಸಂಶೋಧನೆ ಕೈಗೊಳ್ಳಲು ಮತ್ತು ಎಷ್ಟು ಮಂದಿ ಪ್ರಾಧ್ಯಾಪಕರು ಮಾರ್ಗದರ್ಶಕರಾಗಿ ಕೆಲಸ ಮಾಡಲು ಅವಕಾಶ ಕಲ್ಪಿಸಲಾಗಿದೆ. | ಪ್ರತಿ ವರ್ಷದಲ್ಲಿ ಇಂತಿಷ್ಟು ವಿದ್ಯಾರ್ಥಿಗಳಿಗೆ ಸಂಶೋಧನಾ ಕಾರ್ಯ ಕೈಗೊಳ್ಳಲು ನಿಗದಿಪಡಿಸಿರುವುದಿಲ್ಲ.<br><br>ಪಿಹೆಚ್‌ಡಿ ನಿಯಮಾವಳಿಯನ್ವಯ ಸಹಾಯಕ ಪ್ರಾಧ್ಯಾಪಕರು 04, ಸಹ ಪ್ರಾಧ್ಯಾಪಕರು 06 ಮತ್ತು ಪ್ರಾಧ್ಯಾಪಕರು 08 ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಬಹುದಾಗಿದೆ. |
| (ಉ) | ವಿಶ್ವವಿದ್ಯಾಲಯದಲ್ಲಿ ಸಂಶೋಧನೆಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಸಲ್ಲಿಸಬೇಕಿರುವ ಮಾಹಿತಿ ಕುರಿತ ವೇಳಾಪಟ್ಟಿ ಮತ್ತು ಹೊಸ ಕೋರ್ಸ್ ಸೇರ್ಪಡೆ ಮಾಡಲಾಗಿದೆಯೇ; (ಮಾಹಿತಿ ನೀಡುವುದು) | ಕಾಲಕಾಲಕ್ಕೆ ಸಂಶೋಧನಾ ವಿದ್ಯಾರ್ಥಿಗಳಿಗೆ ವೇಳಾಪಟ್ಟಿಯನ್ನು ಸಿದ್ಧಪಡಿಸಿ ಪ್ರಕಟಿಸಲಾಗುವುದು.<br><br>ಹೊಸ ಕೋರ್ಸ್ ಸೇರ್ಪಡೆಯಾಗಿರುವುದಿಲ್ಲ. |
| (ಊ) | ಮೈಸೂರು ವಿಶ್ವವಿದ್ಯಾಲಯದಿಂದ ಬೇರ್ಪಟ್ಟು ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಮಂಡ್ಯ, ಚಾಮರಾಜನಗರ, ಹಾಸನ ವಿಶ್ವವಿದ್ಯಾಲಯಗಳಲ್ಲಿ ಪಿ.ಎಚ್.ಡಿ. ಪದವಿ ಪ್ರವೇಶಕ್ಕೆ ಪ್ರಸಕ್ತ ಸಾಲಿನಲ್ಲಿ | ಮಂಡ್ಯ, ಚಾಮರಾಜನಗರ, ಹಾಸನ ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಬೋಧಕ ಉದ್ಯೋಗಿಗಳ ಮಾರ್ಗದರ್ಶನದಲ್ಲಿ ಈಗಾಗಲೇ ಪಿಹೆಚ್‌ಡಿ ಪದವಿಗೆ ನೋಂದಣಿ ಮಾಡಿಕೊಂಡಿರುವವರಿಗೆ ಮೈಸೂರು ವಿಶ್ವವಿದ್ಯಾಲಯದ ವತಿಯಿಂದಲೇ ನಿಯಮಾನುಸಾರ |

| | | |
|---|---|---|
| | ಅವಕಾಶ ಇದೆಯೇ; ಇದ್ದಲ್ಲಿ ಕೈಗೊಂಡಿರುವ ಸಿದ್ಧತೆಗಳ ಕುರಿತು ಮಾಹಿತಿ ನೀಡುವುದು? | ಸಂಶೋಧನಾ ಪದವಿ ನೀಡಲಾಗುವುದು. ಆದರೆ, ಮಂಡ್ಯ, ಚಾಮರಾಜನಗರ, ಹಾಸನ ವಿಶ್ವವಿದ್ಯಾಲಯಗಳು ಪ್ರತ್ಯೇಕವಾಗಿ ಕಾರ್ಯನಿರ್ವಹಿಸಲು ಪ್ರಾರಂಭವಾದ ದಿನದಿಂದ ಮೈಸೂರು ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ಪ್ರವೇಶಾತಿಗೆ ಅವಕಾಶವಿರುವುದಿಲ್ಲ. |

ಸಂಖ್ಯೆ: ಇಡಿ 87 ಯುಎಂವಿ 2022

**(ಡಾ: ಅಶ್ವಥ್ ನಾರಾಯಣ ಸಿ.ಎನ್.)**
ಉನ್ನತ ಶಿಕ್ಷಣ, ಐಟಿ ಬಿಟಿ, ವಿಜ್ಞಾನ ಮತ್ತು
ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ
ಸಚಿವರು